ಜಪಾನಿನ ಕತೆಗಳು

# ಪುಟಾಣಿ ಹುಡುಗ ಮತ್ತು ರಾಜಕುಮಾರಿ



**ಹ**ಲವಾರು ವರ್ಷಗಳ ಹಿಂದೆ ಒಂದು ಸಣ್ಣ ಹಳ್ಳಿಯಲ್ಲಿ ಇಳಿವಯಸ್ಸಿನ ಗಂಡ ಹೆಂಡತಿ ವಾಸವಾಗಿದ್ದರು. ಅವರಿಗೆ ಮಕ್ಕಳಿರಲಿಲ್ಲ. ಮುದುಕ ಸೌದೆ ತರಲು ಕಾಡಿಗೆ ಹೋಗಿದ್ದ. ಆ ಸಮಯದಲ್ಲಿ, ಕಾಡಿನಲ್ಲಿ ಪುಟಾಣಿ ಆಕಾರದ ಮಗುವೊಂದನ್ನು ನೋಡಿದ. ಬೊಂಬೆಯಂತೆ ಬಹಳ ಪುಟ್ಟದಾಗಿದ್ದ ಆ ಗಂಡುಮಗುವನ್ನು ಬಹುಪ್ರೀತಿಯಿಂದ ಮನೆಗೆ ಎತ್ತಿಕೊಂಡುಬಂದು ಮುದುಕಿಯ ಕೈಗೆ ಕೊಟ್ಟ. ಈ ಪುಟಾಣಿ ಮಗುವನ್ನು ಪಡೆದ ಇಬ್ಬರಿಗೂ ಬಹಳ ಸಂತೋಷವಾಯಿತು. ದಿನ ಕಳೆದಂತೆ ಮಗುವಿನ ಬುದ್ಧಿ ಬೆಳೆಯಿತು. ಆದರೆ ಆಕಾರದಲ್ಲಿ ಬೆಳವಣಿಗೆ ಆಗಲೇ ಇಲ್ಲ. ಆ ಹುಡುಗ ಒಂದು ಚಿಕ್ಕ ಬೊಂಬೆಯಂತೆಯೇ ಉಳಿದುಬಿಟ್ಟ!

ಇನ್ನು ಈ ಹಳ್ಳಿ ಸಹವಾಸ ಸಾಕು, ಪಟ್ಟಣಕ್ಕೆ ಹೋಗಿ ಯಾವುದಾದರೂ ಕೆಲಸ ಹುಡುಕಿಕೊಳ್ಳೋಣ ಎಂದು ಆ ಬೊಂಬೆ ಹುಡುಗ ತೀರ್ಮಾನಿಸಿದ. ಮುದುಕ ಮತ್ತು ಮುದುಕಿಯರ ಆಶೀರ್ವಾದ ಪಡೆದು ಪಟ್ಟಣದ ಕಡೆಗೆ ಹೊರಟೇಬಿಟ್ಟ. ಪಟ್ಟಣಕ್ಕೆ ಹೋಗಲು ಒಂದು ನದಿಯನ್ನು ದಾಟಬೇಕಾಗಿತ್ತು. ಪುಟಾಣಿ ಆಕೃತಿಯ ಇವನು ಒಂದು ಚಿಕ್ಕ ಬಟ್ಟಲಿನಲ್ಲಿ ಕುಳಿತು ಚಾಪ್‌ಸ್ಟಿಕ್‌ನಿಂದ ಹುಟ್ಟು ಹಾಕುತ್ತ ನದಿ ದಾಟಿಯೇ ಬಿಟ್ಟ! ನಗರಕ್ಕೆ ಬಂದು ನೇರವಾಗಿ ರಾಜನ ಮುಂದೆ ನಿಂತು, ತನಗೆ ಒಂದು ಕೆಲಸ ಕೊಡಬೇಕೆಂದು ಪ್ರಾರ್ಥಿಸಿಕೊಂಡ. ಇವನನ್ನು ನೋಡಿ ರಾಜನಿಗೆ ನಗುವೋ ನಗು. ರಾಜ ಆ ಪುಟಾಣಿ ಹುಡುಗನನ್ನು ತನ್ನ ಅಂಗೈಯಲ್ಲಿರಿಸಿಕೊಂಡು ನಗುತ್ತ ವಿಚಾರಿಸಿದ: "ನೀನಾದರೋ ಇಷ್ಟೊಂದು ಸಣ್ಣಗಿದ್ದೀಯೆ. ಏನು ಕೆಲಸ ತಾನೇ ಮಾಡಬಲ್ಲೆ?"

ಆಗ ರಾಜಕುಮಾರಿ ಅಲ್ಲಿಯೇ ರಾಜನ ಪಕ್ಕ ಕುಳಿತಿದ್ದಳು. ಈ ಪುಟಾಣಿ ಹುಡುಗನ ಕಡೆಗೆ ರಾಜಕುಮಾರಿ ಆಕರ್ಷಿತಳಾದಳು. ಬೊಂಬೆಯಂತೆ ಇವನ ಜೊತೆಗೆ ಆಟವಾಡಬಹುದೆಂದು ಭಾವಿಸಿದಳು. "ಅಪ್ಪಾ ಈ ಪುಟಾಣಿ ಹುಡುಗನನ್ನು ನನಗೆ ಕೊಡಿ. ನಾನು ಇವನನ್ನು ಬಹಳವಾಗಿ ಮೆಚ್ಚಿಕೊಂಡಿದ್ದೇನೆ" ಎಂದಳು. ಮಗಳ ಉತ್ಸಾಹವನ್ನು ಕಂಡು ರಾಜನಿಗೆ ಸಂತೋಷವಾಯಿತು. "ಹಾಗೆಯೇ ಆಗಲಿ, ಮಗೂ" ಎಂದು ಒಪ್ಪಿಕೊಂಡನು. ಈಗ ಈ ಪುಟಾಣಿ ಹುಡುಗ, ರಾಜಕುಮಾರಿ ಎಲ್ಲಿರುತ್ತಾಳೋ ಅಲ್ಲಿಯೇ ಇರತೊಡಗಿದನು. ಹೀಗಿರುವಾಗ, ಒಂದು ದಿನ ರಾಜಕುಮಾರಿ ದೇವರ ದರ್ಶನಕ್ಕೆ ದೇವಸ್ಥಾನಕ್ಕೆ ಹೊರಟಳು. ಎಂದಿನಂತೆ ಜೊತೆಯಲ್ಲಿ ಈ ಪುಟಾಣಿಯೂ ಇದ್ದ. ಆಗ ಎಲ್ಲಿಂದಲೋ ಬಂದ ಒಬ್ಬ ರಾಕ್ಷಸ ರಾಜಕುಮಾರಿಯ ಮೇಲೆ ಆಕ್ರಮಣ ಮಾಡಿದ. ಅವಳನ್ನು ಎತ್ತಿಕೊಂಡು ಹೋಗಲು ಅವನು ಬಂದಿದ್ದ. ಭಯಂಕರವಾಗಿದ್ದ ಈ ರಾಕ್ಷಸನ ಘರ್ಜನೆಯನ್ನು ಕೇಳಿದ ಜನರು ಭಯದಿಂದ ಅತ್ತಿತ್ತ ಓಡಲಾರಂಭಿಸಿದರು.

ಇದನ್ನೆಲ್ಲ ಈ ಬೊಂಬೆ ಹುಡುಗ ನೋಡುತ್ತಲೇ ಇದ್ದ. ಕಡೆಗೆ ತನ್ನ ಕೈಯಲ್ಲಿದ್ದ ಸೂಜಿಯನ್ನೇ ಎತ್ತಿಹಿಡಿದು, ಧೈರ್ಯದಿಂದ ರಾಕ್ಷಸನನ್ನು ಎದುರಿಸಿದ. ಚಮತ್ಕಾರದಿಂದ ರಾಕ್ಷಸನ ಮೈಮೇಲೆ ಏರಿ, ಸೂಜಿಯಿಂದ ಅವನ ಕಣ್ಣನ್ನೇ ಚುಚ್ಚಿಬಿಟ್ಟ. ರಾಕ್ಷಸನಾದರೋ, "ಅಯ್ಯಯ್ಯೋ ಅಪ್ಪಾ, ಅಯ್ಯೋ ಅಮ್ಮಾ" ಎಂಬ ನೋವಿನಿಂದ ಚೀತ್ಕಾರ ಮಾಡುತ್ತ, ಅಲ್ಲಿಂದ ಓಡಿಹೋದ. ಗಾಬರಿಯಿಂದ ಓಡಿಹೋಗುವಾಗ ಗಡಿಬಿಡಿಯಲ್ಲಿ ತನ್ನ ಯಕ್ಷಿಣಿ ದಂಡವನ್ನು ಅಲ್ಲಿಯೇ ಬಿಟ್ಟು ಹೋಗಿದ್ದ.

ಈ ಮಂತ್ರದಂಡವನ್ನು ಹಿಡಿದು, ಏನು ಬೇಡಿದರೂ ಅದು ದೊರೆಯುತ್ತದೆ ಎಂದು ರಾಜಕುಮಾರಿಗೆ ತಿಳಿದಿತ್ತು. ಅವಳು ಅದನ್ನು ಹಿಡಿದು ಹೀಗೆ ಪ್ರಾರ್ಥನೆ ಸಲ್ಲಿಸಿದಳು: "ಈ ಪುಟಾಣಿ ಹುಡುಗನನ್ನು ಮಾಮೂಲು ಮನುಷ್ಯನನ್ನಾಗಿ ಮಾಡು" ಎಂದು. ಅವಳ ಪ್ರಾರ್ಥನೆ ಮುಗಿಯುವಷ್ಟರಲ್ಲಿ ಕುಳ್ಳನು ಒಬ್ಬ ಅತ್ಯಂತ ಸುಂದರ ಯುವಕನಾಗಿ ಮಾರ್ಪಟ್ಟಿದ್ದ. ಇವನ ಬದಲಾದ ರೂಪವನ್ನು ನೋಡಿ, ರಾಜಕುಮಾರಿಯು ಮುಗ್ಧಳಾಗಿ ಹೋದಳು. ರಾಜನು ಇವರಿಬ್ಬರ ಮದುವೆಯನ್ನು ವಿಜೃಂಭಣೆಯಿಂದ ನೆರವೇರಿಸಿದ. ಅನಂತರ ಇವರು ಬಹಳ ಕಾಲದವರೆಗೆ ಸುಖ ಮತ್ತು ಶಾಂತಿಯಿಂದ ಸಂಸಾರ ಮಾಡುತ್ತ ಕಾಲ ಕಳೆದರು.

(**ಬಂಗಾಳಿ ಮೂಲ:** ರಾಜಕೃಷ್ಣ ಭಟ್ಟಾಚಾರ್ಯ, **ಚಿತ್ರ** : ಜುಂಕೋ ಭಟ್ಟಾಚಾರ್ಯ, **ಕನ್ನಡಾನುವಾದ** : ಗಿರಿಜಾದೇವಿ)



# ಸ್ವಾಮಿ ವಿವೇಕಾನಂದರು ನಿರೂಪಿಸಿದ ನೀತಿಕಥೆಗಳು



ಡಾ. ಕೆ. ಅನಂತರಾಮು

## ಎಲೆಗಳನ್ನು ಎಣಿಸಬೇಡಿ, ಮಾವಿನಹಣ್ಣು ತಿನ್ನಿ

**ನಾ**ವು ಭಕ್ತಿಮಾರ್ಗದಲ್ಲಿ ಸಾಗಬೇಕೆಂದಿದ್ದೇವೆ, ಅದಕ್ಕಾಗಿ ನಮಗೊಬ್ಬ ಸದ್ಗುರು ಬೇಕೆಂದು ಹಂಬಲಿಸುತ್ತಿದ್ದೇವೆ ಎಂದುಕೊಳ್ಳೋಣ. ಆದರೆ ನಮಗೆ ಯಾರಿಂದ ಉಪದೇಶ ದೊರಕಬೇಕು, ಯಾರಿಂದ ಮಾರ್ಗದರ್ಶನ ಪಡೆಯಬೇಕು ಎಂಬುದನ್ನು ತಿಳಿದುಕೊಳ್ಳುವಷ್ಟು ಸಾಮರ್ಥ್ಯ ಕೂಡ ಇಲ್ಲ ಎಂಬುದಾಗಿಯೂ ಭಾವಿಸಿಕೊಳ್ಳೋಣ. ಅಂತಹ ಹೊತ್ತಿನಲ್ಲಿ ಗುರುವಿನ ಯೋಗ್ಯತೆಯನ್ನು ನಿಷ್ಕರ್ಷಿಸಬಲ್ಲ ಕೆಲವು ವಿಶಿಷ್ಟಗುಣಗಳನ್ನು ಮನಸ್ಸಿಗೆ ತಂದುಕೊಳ್ಳಬೇಕು ಎಂದು ವಿವೇಕಾನಂದರು ಹೇಳಿದ್ದಾರೆ. ಹಾಗೆ ಹೇಳಿದ ಬಳಿಕ ಗುರುವಿಗೆ **ಶಾಸ್ತ್ರಗಳ ಸಾರವು ಗೊತ್ತಿರಬೇಕು; ಅವನು ಪಾಪರಹಿತನಾಗಿರಬೇಕು; ಅವನು ಸಂಪತ್ತು, ಕೀರ್ತಿ ಮುಂತಾದವುಗಳನ್ನು ಗಳಿಸುವ ಸ್ವಾರ್ಥದಿಂದ ಮುಕ್ತನಾಗಿರಬೇಕು** ಎಂಬ ಮೂರು ಮುಖ್ಯವಾದ ಲಕ್ಷಣಗಳನ್ನು ನಿರೂಪಿಸಿದ್ದಾರೆ. ಇಂತಹ ಲಕ್ಷಣಗಳೆಲ್ಲ ಕಂಡುಬಂದರೆ ಯಾವುದೇ ಅಂಜಿಕೆಯಿಲ್ಲದೆ ನೀವು ಅವರ ಉಪದೇಶವನ್ನು ಶ್ರವಣಮಾಡಬಹುದು; ಅವನ ಶಿಷ್ಯನಾಗಬಹುದು ಎಂದು ಸೂಚಿಸಿದ್ದಾರೆ. ಸದ್ಗುರುವಾದವನಿಗೆ ಶಾಸ್ತ್ರಗಳ ಸಾರವು ಗೊತ್ತಿರಬೇಕು ಎಂಬುದನ್ನು ವಿವೇಕಾನಂದರು ಸೂಚಿಸಿದ ಕಥೆ ಬೋಧಪ್ರದವಾಗಿದೆ.

ಪ್ರಪಂಚದಲ್ಲಿ ಬೋಧನೆಗೆ ತೊಡಗುವ ಗುರುಗಳೆಲ್ಲ ವೇದ ಶಾಸ್ತ್ರಗಳನ್ನೋ, ಬೈಬಲ್ ಕುರಾನುಗಳನ್ನೋ ತಾವು ಓದುತ್ತಾ, ತಮ್ಮ ಶಿಷ್ಯರಿಗೂ ಬೋಧಿಸುತ್ತಾರೆ. ಹಾಗೆ ಬೋಧಿಸುವ ಗುರುಗಳಿಗೆ ಆ ಗ್ರಂಥಗಳ ಸಾರವು ಅವರ ಅನುಭವದಲ್ಲಿ ನೆಲೆನಿಂತಿರಬೇಕು. ಹಾಗಿಲ್ಲದೆ ಅದು ಕೇವಲ ಶಬ್ದಜಾಲವಾದರೆ ನಿಷ್ಪ್ರಯೋಜಕವಾಗುತ್ತದೆ. ಆ ಶಬ್ದಜಾಲವು ನಿಜವಾಗಿಯೂ ಧರ್ಮದ ನೀರಸವಾದ ಭಾಗ. ಕೇವಲ ಶಬ್ದಜಾಲ, ವಾಕ್ಯಲಕ್ಷಣ, ಪದಗಳ ನಿಷ್ಪತ್ತಿ ಮುಂತಾದ ಹೊರವಿಚಾರಗಳಲ್ಲಿಯೇ ನಿರತನಾದ ಗುರುವು ತಾನು ಬೋಧಿಸುವ ಶಾಸ್ತ್ರಗಳ ಸಾರವನ್ನು ಶಿಷ್ಯರ ಅನುಭವಕ್ಕೆ ತಂದುಕೊಡುವಲ್ಲಿ ವಿಫಲನಾಗುತ್ತಾನೆ. ಶಾಸ್ತ್ರಗಳ ಪದಪುಂಜವೆಂಬುದು ಗೊಂಡಾರಣ್ಯದಂತೆ ಇರುತ್ತದೆ. ಅನೇಕ ವೇಳೆ ಅದು ನಮ್ಮನ್ನು ದಾರಿತಪ್ಪಿಸಿಬಿಡುತ್ತದೆ. ಅನುಭವಿಸಿ ಹೇಳಲಾರದ ಗುರುಗಳಾದರೋ ಒಂದು ಪದವನ್ನೇ ಕೈಗೆತ್ತಿಕೊಂಡು, ಆ ಪದ ಹೇಗೆ ಹುಟ್ಟಿತು, ಆ ಪದವನ್ನು ಮೊತ್ತಮೊದಲ ಬಾರಿಗೆ ಯಾರು ಬಳಸಿದರು, ಹಾಗೆ ಬಳಸಿದವರು ಏನು ತಿನ್ನುತ್ತಿದ್ದರು, ಅವರು ಎಷ್ಟು ಹೊತ್ತು ಮಲಗುತ್ತಿದ್ದರು – ಎಂಬವುಗಳ ಮೇಲೆಯೇ ಗಂಟೆ ಗಟ್ಟಲೆ ವ್ಯಾಖ್ಯಾನವನ್ನು ಬರೆದುಬಿಡಬಹುದು. ಆದರೆ ಅದರಿಂದ ಯಾರಿಗೂ ಲಾಭವಿಲ್ಲ.

ಒಂದು ದಿನ ಹತ್ತಾರು ಮಂದಿ ಒಂದು ಗುಂಪು ಮಾಡಿಕೊಂಡು ಒಂದು ಸುಂದರವೂ ವಿಶಾಲವೂ ಆದ ಮಾವಿನ ತೋಟವನ್ನು ಹೊಕ್ಕರು. ತೋಟದ ಒಡೆಯನು ಅವರನ್ನು ಆದರದಿಂದ ಸ್ವಾಗತಿಸಿದನು. ಅದು ಮಾವಿನ ಹಣ್ಣಿನ ಕಾಲವಾಗಿದ್ದುದರಿಂದ ಮರಗಳೆಲ್ಲವೂ ಫಲಭರಿತವಾಗಿದ್ದವು. ಅವರ ಉದ್ದೇಶವೇನೋ ಮಾವಿನಹಣ್ಣನ್ನು ತಿನ್ನುವುದೇ ಆಗಿತ್ತು. ಆದರೆ ತೋಟವನ್ನು ಹೊಕ್ಕ ಆ ಜನರು ಎಲ್ಲಿ ಎಷ್ಟು ಮಾವಿನ ಮರಗಳಿವೆ, ಒಂದೊಂದು ಮರದಲ್ಲಿಯೂ ಎಷ್ಟು ಕೊಂಬೆರೆಂಬೆಗಳಿವೆ, ಒಂದು ಕೊಂಬೆರೆಂಬೆಯಲ್ಲಿಯೂ ಎಷ್ಟು ಹಣ್ಣುಗಳಿವೆ, ಎಷ್ಟು ಎಲೆಗಳಿವೆ ಎಂಬುದನ್ನೆಲ್ಲ ಎಣಿಕೆಮಾಡಿದರು. ತರುವಾಯ ಒಂದೊಂದು ಮರದ ಕಾಂಡದ ಗಾತ್ರವೇನು, ರೆಂಬೆಕೊಂಬೆಗಳ ಗಾತ್ರವೇನು, ಅವುಗಳ ತೊಗಟೆಯ ಬಣ್ಣದ ತಾರತಮ್ಯವೇನು ಮುಂತಾದ ವಿಚಾರಗಳನ್ನು ಕೂಡ ಅಧ್ಯಯನಮಾಡಿ, ಆ ವಿವರಗಳನ್ನೆಲ್ಲ ಒಂದು ಪುಸ್ತಕದಲ್ಲಿ ಬರೆದಿಟ್ಟುಕೊಂಡರು. ಆಮೇಲೆ ಒಂದು ಸಭೆಯನ್ನು ಆಯೋಜಿಸಿ, ತಾವು ಪರೀಕ್ಷಿಸಿ ಬರೆದಿಟ್ಟುಕೊಂಡ ವಿಚಾರಗಳ ಮೇಲೆ ಚರ್ಚೆಮಾಡಲು ಪ್ರಾರಂಭಿಸಿದರು. ಚರ್ಚೆಯೇನೋ ಕುತೂಹಲಕಾರಿಯಾಗಿ, ಉತ್ಸಾಹಪೂರ್ಣವಾಗಿ, ವಿಸ್ತಾರವಾಗಿ ನಡೆಯಿತು. ಹೀಗೆ ಮಾಡುತ್ತ ಅವರು ತಮ್ಮ ಮೂಲ ಉದ್ದೇಶವಾದ ಮಾವಿನಹಣ್ಣು ತಿನ್ನುವುದನ್ನೇ ಮರೆತುಬಿಟ್ಟರು. ಆದರೆ ಆ ಗುಂಪಿನಲ್ಲಿ ವಿವೇಕಿಯೂ ಜಾಣನೂ ಆದ ಒಬ್ಬನು ಮಾತ್ರ, "ನಿಮ್ಮ ಚರ್ಚಾಗೋಷ್ಠಿ ಚೆನ್ನಾಗಿ ನಡೆಯಲಿ, ನನಗದರ ಗೊಡವೆ ಬೇಡ, ನಾನಷ್ಟು ಮಾವಿನಹಣ್ಣು ತಿಂದು ಸುಖಿಸುತ್ತೇನೆ" ಎಂದುಕೊಳ್ಳುತ್ತ ಹಣ್ಣು ತಿಂದು ತೃಪ್ತನಾದನು. ಭಕ್ತಿಮಾರ್ಗದಲ್ಲಿ ಸಾಗಬೇಕೆಂದಿರುವ ಶ್ರದ್ಧಾವಂತರಿಗೆ ಹಣ್ಣು ತಿಂದು ತೃಪ್ತನಾದ ಎಂದರೆ ಶಾಸ್ತ್ರಗಳ ಮರ್ಮವನ್ನರಿತ, ಅವುಗಳ ಅನುಭವದ ನೆಲೆಯಲ್ಲಿ ನಿಂತ ಸದ್ಗುರುವು ಬೇಕು ಎಂದು ತಾತ್ಪರ್ಯ.

ಈ ಕಥೆಯ ಮುಕ್ತಾಯದಲ್ಲಿ ಸ್ವಾಮಿ ವಿವೇಕಾನಂದರು, "ಮಾವಿನ ಮರದ ರೆಂಬೆಕೊಂಬೆಗಳನ್ನಾಗಲಿ, ಹಣ್ಣುಗಳನ್ನಾಗಲಿ, ಎಲೆಗಳನ್ನಾಗಲಿ ಎಣಿಕೆಮಾಡಬಾರದೆಂದಲ್ಲ. ಅಂತಹ ಕಾರ್ಯಕ್ಕೂ ಅನ್ಯತ್ರ ಯೋಗ್ಯವಾದ ಸ್ಥಾನವಿದೆ. ಆದರೆ ಅಧ್ಯಾತ್ಮದ ಕ್ಷೇತ್ರದಲ್ಲಿ ಆ ಬಗೆಯ ಶೋಧನೆಗೆ ಜಾಗವಿಲ್ಲ. ಎಲೆಗಳನ್ನು ಎಣಿಸುವವರ ಪೈಕಿ ನೀವು ಯಾವ ಆಧ್ಯಾತ್ಮಿಕ ವೀರರನ್ನೂ ಕಾಣಲಾರಿರಿ. ನೀವು ಭಕ್ತರಾಗಬೇಕಾದರೆ ಶ್ರೀಕೃಷ್ಣನು ಮಥುರೆಯಲ್ಲಿ ಹುಟ್ಟಿದನೋ, ವ್ರಜಭೂಮಿಯಲ್ಲಿ ಹುಟ್ಟಿದನೋ, ಅಲ್ಲಿ ಅವನೇನು ಮಾಡುತ್ತಿದ್ದನು; ಅವನು ಗೀತೋಪದೇಶ ಮಾಡಿದನಲ್ಲಾ, ಅದು ಮಂಗಳವಾರವಾಗಿತ್ತೋ, ಶುಕ್ರವಾರವಾಗಿತ್ತೋ ಎಂಬಿತ್ಯಾದಿ ಶೋಧಿಸಿ ತಿಳಿಯಬೇಕಾದುದೇನೂ ಇಲ್ಲ. ಗೀತೆಯಲ್ಲಿ ಬರುವ ಕರ್ಮತತ್ಪರತೆ, ಭಗವತ್ಪ್ರೇಮಗಳ ವಿಷಯದಲ್ಲಿ ನಮಗೆ ಆಸಕ್ತಿಯಿದ್ದರೆ ಸಾಕು. ಸಂಶೋಧನೆಯಿಂದ ತುಂಬಿರುವ, ಪಂಡಿತರಂಜನೆಯ ವಾದಗಳಿಗೆಲ್ಲ ಓಂ ಶಾಂತಿಃ ಶಾಂತಿಃ ಶಾಂತಿಃ ಹೇಳಿಬಿಡಿ.